ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಪ್ರಶ್ನೆಯಲ್ಲಿ ಕೇಳಿರುವ ವಿವರಗಳು ಈ ಕೆಳಗೆ ಕಂಡಂತೆ ಇದೆ.—

ಕ್ರಮ ಸಂಖ್ಯೆ	ರಾಜ್ಯದ ಒಳಗಿನ ಸರ್ಕಾರಿ ಕಟ್ಟಡಗಳು	ವಿಧಾನ ಸೌಧ ಖರ್ಚು	ಬೆಂಗಳೂರಿನಲ್ಲಿರುವ ಇತರೆ ಸರ್ಕಾರಿ ಕಟ್ಟಡಗಳು
			(ಲಕ್ಷ ರೂ.ಗಳಲ್ಲಿ)
೧) ೧೯೮೨-೮೩	೫೯೪.೬೩	೧೦.೯೨	೧೬೬.೬೫
೨) ೧೯೮೩-೮೪	೫೫೫.೮೭	೧೦.೪೫	೧೧೪.೦೧
೩) ೧೯೮೪-೮೫	೬೩೭.೮೦	೯.೪೫	೧೧೬.೧೯
೪) ೧೯೮೫-೮೬	೬೫೨.೯೮	೮.೭೮	೧೭೬.೬೯
೫) ೧೯೮೬-೮೭	೮೪೪.೫೩	೨೨.೪೭	೨೨೫.೧೯
೬) ೧೯೮೭-೮೮ (ಡಿಸೆಂಬರ್ ಅಂತ್ಯದವರೆಗೆ)	೨೩೪.೩೭	೧೫.೪೪	೪೫.೭೫

ಆ) ರಾಜ್ಯದಲ್ಲಿ ಕಟ್ಟಡಗಳು ರಸ್ತೆ ಮತ್ತು ಸೇತುವೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ವೆಚ್ಚ ಮಾಡಿದ ಹಣದ ವಿವರಗಳು ಈ ಕೆಳಗೆ ಕಂಡಂತಿವೆ.—

	(ಲಕ್ಷ ರೂ.ಗಳಲ್ಲಿ)
೧) ೧೯೮೨-೮೩	೩೧೦೭.೬೩
೨) ೧೯೮೩-೮೪	೩೨೪೪.೮೭
೩) ೧೯೮೪-೮೫	೩೫೦೧.೮೦
೪) ೧೯೮೫-೮೬	೩೭೭೯.೯೮
೫) ೧೯೮೬-೮೭	೫೦೭೪.೫೩
೬) ೧೯೮೭-೮೮ (೮೭ರ ಡಿಸೆಂಬರ್ ಅಂತ್ಯದವರೆವಿಗೆ) ರಾಜ್ಯ ವಲಯ ಮಾತ್ರ)	೧೧೯೫.೨೭

ಇ) ಮತ್ತು (ಈ) ಪರಿಶೀಲಿಸಲಾಗುವುದು.

ದೊಡ್ಡವಾಡ ಜೂನಿಯರ್ ಕಾಲೇಜು ಪ್ರಿನ್ಸಿಪಾಲರನ್ನು ಆಗಿಂದಾಗ್ಗೆ ವರ್ಗ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆ

೧೦೫೬. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ),—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದಲ್ಲಿ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲರನ್ನು ಆಗಿಂದಾಗ್ಗೆ ವರ್ಗ ಮಾಡುತ್ತಿರುವುದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ ಆಲ್ಲಿಗೆ ಖಾಯಂ ಆಗಿ ಒಬ್ಬ ಪ್ರಿನ್ಸಿಪಾಲರನ್ನು ನೇಮಕ ಮಾಡಲು ಸರ್ಕಾರ ದವರು ಕೈಗೊಂಡಿರುವ ಕ್ರಮವೇನು?

ಶ್ರೀ ಜೀವರಾಜಆಳ್ವ, (ಮಾನ್ಯ ಉನ್ನತ ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ಈಗಾಗಲೇ ಶ್ರೀ ಎನ್. ಕೆ. ಸಾಕೇನ್ನವರ್ ಎಂಬುವರನ್ನು ದೊಡ್ಡವಾಡ ಸರ್ಕಾರಿ ಸ್ವತಂತ್ರ ಕಿರಿಯ ಕಾಲೇಜಿಗೆ ದಿನಾಂಕ ೧೧-೧೧-೮೭ರಂದು ನೇಮಕಾತಿ ಮಾಡಲಾಗಿದೆ. ಆದರಂತೆ ಅವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ವಿವರ

೫೧೫. ಶ್ರೀ ಎಸ್. ಎಸ್. ಕಡಪಟ್ಟಿ (ಹಂನಗುಂದ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿಗಳ ಉದ್ದವೆಷ್ಟು ? ಮತ್ತು ಇದ ರಾಷ್ಟ್ರೀ ದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗೆ ಹೋಲಿಸಿದರೆ ಶೇಕಡಾವಾರು ಎಷ್ಟಾಗುತ್ತದೆ. (ರಾಷ್ಟ್ರೀಯ ಹೆದ್ದಾರಿ ಹೆಸರು ಉದ್ದ, ಇವುಗಳ ವಿವರ ನೀಡಿರಿ)

ಆ) ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಗೆ ನಿಗದಿಯಾಗಿರುವ ಹಣ ಎಷ್ಟು ಮತ್ತು ಗುರಿ ಸಾಧನೆಗಳೇನು ಮತ್ತು ಇವುಗಳಿಗೆ ಆಗಿರುವ ವೆಚ್ಚವೇನು.

(ವರ್ಷವಾರು ಮತ್ತು ರಾಷ್ಟ್ರೀಯ ಹೆದ್ದಾರಿವಾರು ವಿವರಗಳನ್ನು ನೀಡಿರಿ)

ಇ) ರಾಷ್ಟ್ರೀಯ ಹೆದ್ದಾರಿ ೧೩ ರಲ್ಲಿ ೮೩ ರಲ್ಲಿ ದ್ವಿಪಥವು ಯಾವಾಗ ಪೂರ್ಣಗೊಳ್ಳುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ. (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದವು ೧೯೬೮ ಕಿ.ಮೀ. ವಿವರಗಳನ್ನು ಅನುಬಂಧ೧ರಲ್ಲಿ ಲಗತ್ತಿಸಿದೆ. ರಾಷ್ಟ್ರದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದ ೩೧೯೮೭ ಕಿ. ಮಿ. ರಾಜ್ಯದರಾಷ್ಟ್ರೀಯ ಹೆದ್ದಾರಿಗಳ ಉದ್ದವು ರಾಷ್ಟ್ರಕ್ಕೆ ಹೋಲಿಸಿದಾಗ ೬.೧೪ ಶೇ. ಆಗುತ್ತದೆ.

ಆ) ರಾಷ್ಟ್ರೀಯ ಹೆದ್ದಾರಿಗಳು ಕೇಂದ್ರ ಸರ್ಕಾರ (ಸೆಕ್ಟರ್) ವಿಭಾಗ ಸ್ಕೀಮಿನಲ್ಲಿ ಬರುತ್ತವೆ. ಆದಕಾರಣ ರಾಜ್ಯದ ಬಜೆಟ್‌ನಲ್ಲಿ ಇದಕ್ಕೆ ಪ್ರತ್ಯೇಕ ಹಣ ನಿಗದಿ ಮಾಡುವುದಿಲ್ಲ. ಭಾರತ ಸರ್ಕಾರ ದಿಂದ ಬಿಡುಗಡೆ ಆಗಿ ಬರುವ ಹಣವನ್ನು ಪ್ರತಿವರ್ಷವೂ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಕೆಲಸಗಳಿಗೆ ನಿಗದಿ ಮಾಡಲಾಗುತ್ತದೆ, ೧೯೮೪-೮೫, ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಒದಗಿಸ ಲಾದ ಮತ್ತು ವೆಚ್ಚದ ವಿವರ ಲಗತ್ತಿಸಿದೆ (ಅನುಬಂಧ-೨)

ಇ) ಈ ಕೆಲಸದ ಅಂದಾಜು ಕೇಂದ್ರ ಸರ್ಕಾರದಿಂದ ಮಂಜೂರಾದ ಮೇಲೆ ಕೆಲಸವನ್ನು ತೆಗೆದು ಕೊಳ್ಳಲಾಗುತ್ತದೆ.